# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 24-03-2021 ಪ್ರಶ್ನೆ ಸಂಖ್ಯೆ : 1706 (2008)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಚಂದ್ರಶೇಖರ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 24-03-2021

ಉತ್ತರಿಸುವ ಸಚಿವರು: ಮಾನ್ಯ ಮುಜರಾಯಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ವಿಷಯ : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಬಾಕಿ ಇರುವ ಕಡತಗಳ ಕುರಿತು

(ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಬಹಳಷ್ಟು ಕಡತಗಳು ವಿಲೇವಾರಿಯಾಗದೆ ಬಾಕಿ (Pending) ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಶೀಘ್ರವಾಗಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಕಳೆದ ಒಂದು ವರ್ಷದಿಂದ ಪ್ರಸ್ತುತ ದಿನಾಂಕದವರೆಗೆ ವಿಲೇವಾರಿ ಮಾಡಿದ ಮತ್ತು ಬಾಕಿ ಇರುವ ಕಡತಗಳು ಎಷ್ಟು ; (ಕಡತಗಳ ಸಂಖ್ಯೆ, ವಿಷಯ ಮತ್ತು ಕೈಗೊಂಡ ಕ್ರಮಗಳ ಮಾಹಿತಿ ಸಹಿತ ದಾಖಲೆಗಳನ್ನು ನೀಡುವುದು)

(ಈ) ಕಳೆದ ಒಂದು ವರ್ಷದಲ್ಲಿ ಇಲಾಖೆಯ ಗ್ರೂಪ್ ಬಿ, ಸಿ, ಮತ್ತು ಡಿ ವೃಂದದ ವರ್ಗಾವಣೆ (ನೌಕರರ ಹೆಸರು, ಕಾರ್ಯನಿರ್ವಹಿಸು ತ್ತಿರುವ ಸ್ಥಳ, ವರ್ಗಾವಣೆಗೊಂಡ ಸ್ಥಳ, ಕರ್ತವ್ಯ ನಿರ್ವಹಿಸಿದ ಅವಧಿ ಮತ್ತು ವರ್ಗಾವಣೆಗೆ ಕಾರಣ ಸಹಿತ ಹಾಗೂ ವರ್ಗಾವಣೆ ಮಾಡಲಾದ ದಿನಾಂಕ ಸಹಿತ ವಿವರಗಳನ್ನು ನೀಡುವುದು)

(ಉ) ಕಡತ ಸಂಖ್ಯೆ 299 BET 2020 (1878740/2020) ಹಲವು ತಿಂಗಳುಗಳಿಂದ ವಿಲೆಗೆ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವಿಲೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಸದರಿ ಕಡತಕ್ಕೆ ಅನುಮೋದನೆ ನೀಡಿದ್ದಾರೆಯೇ, ನೀಡಿದ್ದಲ್ಲಿ, ಆದೇಶ ನೀಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು ;

(ಋ) ಕಡತ ಇಷ್ಟು ದಿನ ಬಾಕಿ ಇರಲು ಕಾರಣವೇನು ; ಯಾವ ಯಾವ ಆಧಿಕಾರಿಗಳ ಬಳಿ ಎಷ್ಟು ದಿನಗಳವರೆಗೆ ಈ ಕಡತವಿತ್ತು; (ಮಾಹಿತಿ ನೀಡುವುದು) ಮತ್ತು (ಕಡತದ ಸಂಪೂರ್ಣ ದಾಖಲೆಯೊಂದಿಗೆ ಮಾಹಿತಿ ನೀಡುವುದು)